Additional Hospital in Civil Area

267. Sri K. R. SRINIVASULU NAYUDU (Shanthinagar).—

Will the Minister for Health be pleased to state :—

whether the Governmeht contemplates to have one more general hospital in the Civil area of Bangalore in view of the increase in the area and popnlation of that area ?

Sri H. SIDDAVEERAPPA (Minister for Health)—

No.

ಶ್ರೀ ಕೆ. ಆರ್. ಶ್ರೀನಿವಾಸಲುನಾಯ್ಡು.—ಸ್ವಾಮಿ ನನ್ನ ಪ್ರಶ್ನೆಗೆ ಕೂಟ್ಟಿರತಕ್ಕ ಉತ್ತರದಲ್ಲಿ ಅಚ್ಚುಕಟ್ಟಾಗಿ ಇಲ್ಲ ಎಂದು ಹೇಳಿದ್ದೀರಿ. ತಮಗೆ ಗೊತ್ತಿರಬಹುದು ಸಿವಿಲ್ ಪ್ರದೇಶದಲ್ಲಿ ಸುಮಾರು 6 ಲಕ್ಷ ಜನ ವಾಸಮಾಡುತ್ತಿದ್ದಾರೆ ಎಂದು. ಆದರೆ ಇಲ್ಲಿ ಇರತಕ್ಕದ್ದು ಒಂದೇ ಜನರಲ್ ಆಸ್ಪತ್ರೆ. ಅಲ್ಲಿ 620 ಬೆಡ್‌ಗಳಿವೆ, 63 ಜನ ನರ್ಸ್‌ಗಳಿದ್ದಾರೆ. ಇನ್ನು ಮುಂದಕ್ಕಾದರೂ ಅಲ್ಲ ಇನ್ನೊಂದು ಆಸ್ಪತ್ರೆಯನ್ನು ಪ್ರಾರಂಭಿಸುತ್ತೇವೆ ಎಂದು ಸರ್ಕಾರದವರು ಆಶ್ವಾಸನೆಯನ್ನು ಕೊಟ್ಟಿಲ್ಲ. ಹಣದುಬ್ಬರ ಎಂದು ಹೇಳುತ್ತಾರೆ. ಹಣದ ಅಭಾವ ಎಂದು ಹೇಳುತ್ತಾರೆ. ಹೀಗಿರುವಾಗ ಸಿವಿಲ್ ಪ್ರದೇಶದಲ್ಲಿ ಅಲ್ಲಿನ ಜನಸಂಖ್ಯೆಗೆ ಅನುಗುಣವಾಗಿ ಆಸ್ಪತ್ರೆ ಇಲ್ಲದೆ ಇರುವುದರಿಂದ ಅಲ್ಲಿನ ಜನಗಳಿಗೆ ತೊಂದರೆಯಾಗಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ ?

† ಶ್ರೀ ದೇವೇಂದ್ರಪ್ಪ ಘಾಳಪ್ಪ. (ಆರೋಗ್ಯ ಶಾಖೆಯ ರಾಜ್ಯ ಮಂತ್ರಿಗಳು).—ಅಧ್ಯಕ್ಷರೇ ಈಗಿರತಕ್ಕ ಪರಿಸ್ಥಿತಿಯಲ್ಲಿ ಐದನೆಯ ಪಂಚವಾರ್ಷಿಕ ಯೋಜನೆಯಲ್ಲಿ ಯಾವುದಾವರೂ ಮಾಡಬಹುದೇ ಹೊರತು ಈಗ ಯಾವುದೂ ಮಾಡುವುದಕ್ಕೆ ಸಾಧ್ಯವಿಲ್ಲ. ಈಗ ಸಾಕಷ್ಟು ಹಣದ ಕೊರತೆ ಇರುವುದರಿಂದ ಈಗ ಆ ಬಗ್ಗೆ ಏನೂ ಮಾಡುವುದಕ್ಕೆ ಸಾಧ್ಯವಿಲ್ಲ.

ಶ್ರೀ ಕೆ. ಆರ್. ಶ್ರೀನಿವಾಸುಲು ನಾಯ್ಡು.—ಈಗ ಸಿವಿಲ್ ಪ್ರದೇಶದಲ್ಲಿರತಕ್ಕ ಖಾಸಗೀ ಆಸ್ಪತ್ರೆಗಳು ಏನಿವೆ ಅವುಗಳಲ್ಲಿ ಬಡವರಿಂದ ಬೇಕಾದಷ್ಟು ಹಣವನ್ನು ವಸೂಲು ಮಾಡುತ್ತಿದ್ದಾರೆ. ಮಿಷನ್ ಆಸ್ಪತ್ರೆಗಳೂ ಅದೇ ರೀತಿ ಮಾಡುತ್ತಿವೆ. ಅವರ ಮೇಲೆ ಸರ್ಕಾರದ ಯಾವ ಒಂದು ಹತೋಟಿಯೂ ಇಲ್ಲವೇ ? ಖಾಸಗೀ ಆಸ್ಪತ್ರೆಗಳು ವ್ಯಾಪಾರ ಕೇಂದ್ರಗಳಾಗಿವೆ. ಸಾರ್ವಜನಿಕರಿಗೆ ಆ ಆಸ್ಪತ್ರೆಗಳಲ್ಲಿ ಅನುಕೂಲ ಸಿಕ್ಕುವುದಿಲ್ಲ ಎಂಬುದು ತಮ್ಮ ಗಮನಕ್ಕೆ ಬಂದಿದೆಯೇ ? ಐದನೆಯ ಪಂಚವಾರ್ಷಿಕ ಯೋಜನೆಯನ್ನು ಕಾರ್ಯಗತ ಮಾಡುವ ವೇಳೆಗೆ ಬೇಕಾದಷ್ಟು ಬೇಡಿಕೆಗಳು ಮುಂದೆ ಬರುತ್ತವೆ. ಆದ್ದರಿಂದ ನಾನು ಮತ್ತೆ ಒತ್ತಾಯ ಪೂರ್ವಕವಾಗಿ ಸಿವಿಲ್ ಪ್ರದೇಶಕ್ಕೆ ಇನ್ನೊಂದು ಜನರಲ್ ಆಸ್ಪತ್ರೆಯನ್ನು ಕೊಡಬೇಕೆಂದು ಕೇಳುತ್ತೇನೆ. ಇದಕ್ಕೆ ತಾವು ಏನು ಹೇಳುತ್ತೀರಾ ?

ಶ್ರೀ ದೇವೇಂದ್ರಪ್ಪ ಘಾಳಪ್ಪ.—ಈಗಾಗಲೇ ಅದಕ್ಕೆ ಉತ್ತರ ಹೇಳಿದ್ದೇನೆ.

ಶ್ರೀ ಎಂ. ಎಚ್. ಜಯಪ್ರಕಾಶ ನಾರಾಯಣ್. - ಹಣದ ಕೊರತೆ ಇದೆ. ಜನರಲ್ ಆಸ್ಪತೆಯನ್ನು ತೆರೆಯುವುದಕ್ಕೆ ಹಾಗುವುದಿಲ್ಲ ಎಂದು ಮಾನ್ಯ ಮಂತ್ರಿಗಳು ಹೇಳಿದರು. ಆರೋಗ್ಯ ದೃಷ್ಟಿಯಿಂದ ಹೆಚ್ಚು ದೃಢಕಾಯರಾಗಿ ಜನಗಳು ಬದುಕಬೇಕು. ಅವರು ಹೆಚ್ಚು ಕಾಲ ಬದುಕಬೇಕು ಎಂದು ಸರ್ಕಾರದವರು ಫ್ಯಾಮಿಲಿ ಪ್ಲಾನಿಂಗಿಗೆ ಕೋಟ್ಯಾಂತರ ರೂಪಾಯಿಗಳನ್ನು ಖರ್ಚು ಮಾಡುತ್ತಿದ್ದಾರೆ. ಹೀಗಿರುವಾಗ ಯಾವುದಾದರೂ ಒಂದು ಭಾಗದಲ್ಲಿ ಹಣವನ್ನು ಈ ಬಾಬಿಗೆ ಒದಗಿಸಿ ಐದನೆಯ ಪಂಚವಾರ್ಷಿಕ ಯೋಜನೆಯಲ್ಲಿ ಇದನ್ನು ಕಾರ್ಯಗತ ಮಾಡುವುದಕ್ಕೆ ಒಂದು ಪರಿಶೀಲನಾ ಸಮಿತಿಯನ್ನು ನೇಮಕ ಮಾಡಿ ಅವರಿಂದ ವರದಿಯನ್ನು ತರಿಸಿಕೊಂಡು ಇದರ ಅವಶ್ಯಕತೆಯನ್ನು ಪರಿಗಣಿಸುತ್ತಾರೆಯೇ ?